**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: **1**

ಪಿ.ಡಬ್ಲ್ಯೂ: **2**

(ಇಂದು ದಿನಾಂಕಃ 20-07 **2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ ಆರ್.ಜಿ.ಎನ್. ವಕೀಲರಿಂದ**

ನನ್ನ ಮನೆಯು ಘಟನಾ ಸ್ಥಳದಲ್ಲಿದ್ದ ಅಂಗಡಿಯಿಂದ 1000 ಮೀ. ದೂರದಲ್ಲಿದೆ. ನನಗೆ ಯಾವ ದಿಕ್ಕು ಎಂದು ಹೇಳಲು ಅಂದಾಜಾಗುವುದಿಲ್ಲ. ಕುಮಟಾ–ಹೆಗಡೆ ರಸ್ತೆಯು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತದೆ ಎಂದು ಹೇಳಲು ಬರುವುದಿಲ್ಲ. ನನಗೆ ಸೂರ್ಯ ಮೂಡುವ ದಿಕ್ಕು ಹಾಗೂ ಮುಳುಗುವ ದಿಕ್ಕು ತಿಳಿದಿದೆ. ಘಟನಾ ಸ್ಥಳವು ಸೂರ್ಯ ಮೂಡುವ ದಿಕ್ಕು ಹಾಗೂ ಮುಳುಗುವ ದಿಕ್ಕಿನಲ್ಲಿ ಬರುವುದಿಲ್ಲ ಎಂದರೆ ಸಾಕ್ಷಿ ಅದನ್ನು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಕುಮಟಾದಿಂದ ಹೆಗಡೆ ಹೋಗುವಾಗ ಆರೋಪಿತನ ಅಂಗಡಿಯು ಎಡಭಾಗಕ್ಕೆ ಬರುತ್ತದೆ. ಆರೋಪಿತನಿಗೆ ಸಂಬಂಧಿಸಿದ ಅಂಗಡಿಯಲ್ಲಿ ಎಷ್ಟು ಭಾಗವಿದೆ ಎಂದು ನನಗೆ ತಿಳಿದಿಲ್ಲ . ಆರೋಪಿತನಿಗೆ ಸಂಬಂಧಿಸಿದೆ ಎನ್ನಲಾದ ಅಂಗಡಿಯು ಯಾರ ಹೆಸರಿನಲ್ಲಿದೆ ಎಂಬ ಬಗ್ಗೆ ನನಗೆ ತಿಳಿದಿಲ್ಲ. ಆರೋಪಿತನು ಅಂಗಡಿಯನ್ನು ಪ್ರಾರಬಂ, ಮಾಡಿ ಎಷ್ಟು ವರ್ಷಗಳು ಆಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ.4ರಲ್ಲಿ ನಾನು ಗ್ಯಾರೇಜಗೆ ಎಷ್ಟು ಹೊತ್ತಿಗೆ ಹೊತೆಗಿರುತ್ತೇನೆ ಎಂಬ ಬಗ್ಗೆ ನಮೂದು ಮಾಡಿರುತ್ತೇನೆ.. ನಿಪಿ.4ಲ್ಲಿ ನಾನು ಸುಮಾರು 10.30 ರಿಂದ 11.00 ಗಂಟೆಯ ಸಮಯದಲ್ಲಿ ಹೋಗಿರುತ್ತೇನೆ ಎಂದು ನಮೂದು ಮಾಡಿರುತ್ತೇನೆ. ಗಾರೇಜ್ ಇರುವ ಎಡಭಾಗದಲ್ಲಿ ಒಂದು ಹೊಟೆಲ್, ಒಂದು ವೆಲ್ಡಿಂಗ್ ವರ್ಕ್ಸ ಶಾಪ, ಕಿಟಕಿಯ ಚೌಕಟ್ಟನ್ನು ಮಾಡುವ ಒಂದು ಅಂಗಡಿ ಇದೆ, ಗ್ಯಾರೇಜ್ ನಲ್ಲಿ

**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: 1

ಪಿ.ಡಬ್ಲ್ಯೂ: 2

ಮೂರು ಜನ ಮ್ಯಾಕಾನಿಕಗಳು ಇದ್ದರು. ನಾನು ನಿಪಿ.4ರಲ್ಲಿ ಸದರಿ ವದಿೂರು ಜನ ಮ್ಯಾಕಾನಿಕ ಅವರ ಹೆಸರನ್ನು ನಮೂದು ಮಾಡಿರುವುದಿಲ್ಲ. ಗ್ಯಾರೇಜನ ಪಕ್ಕದಲ್ಲಿ ಅದ್ದ ಚಹಾದ ಅಂಗಡಿಯಲ್ಲಿ ಘಪಿಟನೆ ನಡೆದಿದೆ ಎನ್ನಲಾದ ದಿನ ಎಷ್ಟು ಜನ ಇದ್ದರು ಎಂಬ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ನಿಪಿ.4ರಲ್ಲಿ ನಾನು ಈ ಕುರಿತಾಗಿ ಮಾಹಿತಿಯನ್ನು ಬರೆದಿರುವುದಿಲ್ಲ.

ನಾನು ಘಟನೆ ನಡೆದಿದೆ ಎನ್ನಲಾದ ದಿನ ಗ್ಯಾರೇಜ್ ನಲ್ಲಿ 10 ರಿಂದ 15 ನಿಮಿಷಗಳ ಕಾಲ ಇದ್ದೆನು ಈ ವಿಷಯವನ್ನು ನಾನು ನಿಪಿ.1ರಲ್ಲಿ ನಮೂದಿಸಿರುವುದಿಲ್ಲ. ನಾನು ಘಟನೆ ನಡೆದಿದೆ ಎನ್ನಲಾದ ಸಂದರ್ಭದಲ್ಲಿ ನನ್ನ ಬೈಕನ್ನು ಗ್ಯಾರೇಜನಲ್ಲಿ ಇಟ್ಟು ನಾನು ನಡೆದುಕೊಂಡು ಹೋಗುತ್ತಿದ್ದೆನು. ಗ್ಯಾರೇಜನಿಂದ ನನ್ನ ಮನೆಯು ಮುಕ್ಕಾಲು ಕಿ.ಮೀ. ದೂರದಲ್ಲಿದೆ. ಗ್ಯಾರೇಜನಿಂದ ಅಂಗಡಿಗೆ 500 ಮೀ. ದೂರವಿದೆ. ನಿಪಿ.4ರಲ್ಲಿ ನಾನು ಗ್ಯಾರೇಜನಲ್ಲಿ ಇದ್ದಾಗ ಆರೋಪಿತನು ನನಗೆ ದುಡ್ಡನ್ನು ಯಾವಾಗ ನೀಡುತ್ತೀ ಎಂದು ಅವಾಚ್ಯ ಶಬ್ದದಿಂದ ಬೈದಿರುತ್ತಾರೆ. ಗ್ಯಾರೇಜನಿಂದ ಆರೋಪಿತನ ಅಂಗಡಿಯ ಬಳಿ ನಾನು 11.00 ರಿಂದ 11.30 ಗಂಟೆಯ ಒಳಗೆ ಬಂದಿರುತ್ತೇನೆ. 11.00 ರಿಂದ 12.00 ಗಂಟೆ ಎಂದರೆ ಅಂಗಡಿಯಲ್ಲಿ ಅಂಗಡಿಯ ಕೆಲಸಗಾರರು ಹಾಗೂ ಗ್ರಾಹಕರು ಬಂದಿರುತ್ತಾರೆ ಎಂದರೆ ಸಾಕ್ಷಿಯ ಸದರಿ ಸಂದರ್ಭದಲ್ಲಿ ಒಬ್ಬ ಗ್ರಾಹಕರು ಹಾಗೂ ಮೂರು ಸಿಬ್ಬಂದಿಯವರು ಇದ್ದರು ಎಂದು ನುಡಿಯುತ್ತಾರೆ. ಆರೋಪಿತನ ಅಂಗಡಿಯ ಸಿಸಿ ಕ್ಯಾಮರಾ ಇದೆ ಎಂದರೆ ಸರಿ. ನಾನು ಗ್ಯಾರೇಜನಲ್ಲಿ ಇದ್ದಾಗ ಆರೋಪಿತನು ಬೈಕನಲ್ಲಿ ಬಂದಿರುತ್ತಾನೆ. ನಾನು ಆರೋಪಿತನು ಬಂದಂತಹ ಬೈಕ ಹಾಗೂ ಅದರ ನಂಬರನ್ನು ಫಿರ್ಯಾದಿಯಲ್ಲಿ ನಮೂದಿಸಿರುವುದಿಲ್ಲ. ಸದರಿ ವಿಷಯವನ್ನು ನಿಪಿ.4ರಲ್ಲಿ ನಮೂದಿಸಲು ಏನು ತೊಂದರೆ ಆಗಿದಿತ್ತು ಎಂದರೆ ಸಾಕ್ಷಿಯು ನನಗೆ ಅದರ ಅವಶ್ಯಕತೆ ಕಂಡು ಬಂದಿಲ್ಲ ಎಂದು

**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: 1

ಪಿ.ಡಬ್ಲ್ಯೂ: 2

ನುಡಿಯುತ್ತಾರೆ. ನಾನು ನಿಪಿ.4ರಲ್ಲಿ ನನಗೆ ಅವಶ್ಯಕತೆವಿದ್ದಷ್ಟೆ ವಬಇರೆದಿರುತ್ತೇನೆ ಎಂದರೆ ಸಾಕ್ಷಿಯು ಘಟನಾ ಸದಳದಲ್ಲಿ ಆದ ವಿಷಯ ಅಷ್ಟ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.4ರಲ್ಲಿ ನಾನು ಯಾವ ಆರೋಪಿತನು ನನಗೆ ಸಾಮಗ್ರಿಗಳನ್ನು ನೀಡಿದ್ದಾನೆ ಎಂಬ ಬಗ್ಗೆ ನಮೂದು ಮಾಡಿರುತ್ತೇನೆ. ನಿಪಿ.4ರಲ್ಲಿ ನಾನು ಆರೋಪಿತನ ಅಂಗಡಿಯಿಂದ ಖರೀದಿಸಿದ್ದೇನೆ ಎಂದು ನಮೂದಿಸಿರುತ್ತೇನೆ. ಆದರೆ ಯಾವ ಆರೋಪಿತರಿಂದ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ.4ರಲ್ಲಿ ನಾನು ಆರೋಪಿತನ ಅಂಗಡಿಯಿಂದ ಸಾಮಾನುಗಳನ್ನು ಯಾವ ದಿನಾಂಕದಂದು ಪಡೆದುಕೊಂಡು ಹೋಗಿದ್ದೇನೆ ಎಂಬ ಬಗ್ಗೆ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ನಾನು ಲಾಕಡೌನ ಸಮಯ ಎಂದು ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಲಾಕಡೌನ ಎಂಬುವುದು 2 ವರ್ಷಗಳ ಕಾಲ ಇತ್ತು ಎಂದರೆ ಸರಿ. ನಿಪಿ.4ರಲ್ಲಿ ನಾನು 10,000/- ರೂ.ಯ ಸಾಮಾನುಗಳನ್ನು ತೆನಿಗೆದುಕೊಂಡು ಹೋಗಿದ್ದೇನೆ ಎಂದು ಸುಳ್ಳಾಗಿ ಬರೆದಿದ್ದೇನೆ ಎಂದರೆ ಸಕ್ಷಿಯು ನಾನು 10,000 ರೂ.ಯ ಸಾಮಾನುಗಳನುನ ಸಾಲ ಮಾಡಿ ತೆಗೆದುಕೊಂಡು ಹೋಗಿರುತ್ತೇನೆ ಎಂದುನ ುಡಿಯುತ್ತಾರೆ. ನಾನು ಆರೋಪಿತನಿಂದ 22,150/- ರೂ.ಯ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದೇನೆ ಎಂದರೆ ಸಾಕ್ಷಿ ನಾನು ಸಾಲ ಮಾಡಿ 10,000/- ಸಾಮಾನುಗಳನ್ನು ತೆಗೆದುಕೊಂಡುಹ ೋಗಿದ್ದೇನೆ ಎಂದು ನುಡಿಯುತ್ತಾರೆ. ಕಾನಮ್ಮ ಟ್ರೇಡರ್ಸ ಎಂಬುವುದು ಸಿಮಂಟ ಹಾಗೂ ಸ್ಟೀಲ್ ವ್ಯಾಪಾರಕ್ಕೆ ಸಂಬಂದಿಸಿದ ಅಂಗಡಿಯ ಯಾಗಿದ್ದು ಜಿ.ಎಸ್.ಟಿ.ಯ ವ್ಯಾಪ್ತಿಗೆ ಬರುತ್ತದೆ ಎಂದರೆಸ ಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದು ಜಿ.ಎಸಿ.ಟಿ.ಯ ಕುರಿತಾಗಿ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನನಗ ಜಿ.ಎಸಿ.ಟಿ.ಯ ಕುರಿತಾಗಿ ನನಗೆ ಮಾಹಿತಿ ಇದ್ದರೂ ಸಹ ನಾನು

**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: 1

ಪಿ.ಡಬ್ಲ್ಯೂ: 2

ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಯ ಸಂದರ್ಭದಲ್ಲಿ ನಾನು ಸಿಸಿ ಟಿವಿ ಫುಟೇಜನ್ನು ತೆಗೆದುಕೊಳ್ಳಿ ಎಂದು ಹೇಳಿದಾಗ ಪಿ.ಎಸ್.ಐ ಅವರು 2ನೇ ಆರೋಪಿತನ ಬಳಿ ಕೇಳಿದ್ದು ಆತನು ಪೊಲೀಸರಿಗೆ ನೀವೇ ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ. ಈ ಕುರಿತಾಗಿ ನಾನು ನಿಪಿ.1ರಲ್ಲಿ ನಮೂದಿಸಿರುವುದಿಲ್ಲ. ನಾನು ಘಟನೆ ನಡೆದ ಮರುದಿನ ಘಟನಾ ಸ್ಥಳಕ್ಕೆ ಪಂಚನಾಮೆಗೆ ಬಂದಿರುತ್ತೇನೆ. ಪಂಚನಾಮೆಯ ಸಂದರ್ಭದಲ್ಲಿ ನಾನು, ಹೆಂಡತಿ, ಹೊಡೆಯುವುದನ್ನು ನೋಡಿದ ಎರಡು ಸಾಕ್ಷಿದಾರರು ಹಾಗೂ ಪಿ.ಎಸ್.ಐ.ರವರು ಹಾಜರಿದ್ದರು. ನನಗೆ ಹೊಡೆದ ಕೂಡಲೇ ನಾನು ಮೊದಲು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಯಿಂದ ಪೊಲೀಸ್ ಠಾಣೆಗೆ ಸಂಜೆ ಹೋಗಿರುತ್ತೇನೆ. ನಿಪಿ.4ನ್ನು ನಾನು ಪೊಲೀಸರಿಗೆ ಬರೆದು ನೀಡಿರುತ್ತೇನೆ. ನಿಪಿ.4ನ್ನು ಯೊಗೇಶ ಮಡಿವಾಳ ಇತನು ಬರೆದಿರುತ್ತಾನೆ. ನಿಪಿ.4ನ್ನು ಯಾರು ಬರೆದಿರುತ್ತಾರೆ ಎಂಬ ಬಗ್ಗೆ ನಾನು ನಮೂದಿಸಿರುವುದಿಲ್ಲ ಅದನ್ನು ಬರೆಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಿಪಿ.1ನ್ನು ಅಂಗಡಿಯ ಒಳಗಡೆ ಮಾಡಿರುತ್ತಾರೆ. ಎಂ.ಓ.1ನ್ನು ನಾನು ಪಂಚನಾಮೆಯ ಸಂದರ್ಭದಲ್ಲಿ ತೆಗೆದುಕೊಂಡು ಬಂದಿರುತ್ತೇನೆ. ಪಂಚನಾಮೆಯಲ್ಲಿ ನಾನು ಧರಿಸಿದ್ದ ಅಂಗಿಯು ಎಷ್ಟು ಹರಿದಿದೆ ಎಂಬ ಬಗ್ಗೆ ನಿಪಿ.1ರಲ್ಲಿ ನಮೂದು ಮಾಡಿರುವುದಿಲ್ಲ ಮು.ಮಾಲು.1 ನನಗೆ ಸಂಬಂಧಿಸಿದೆ ಎಂಬ ಬಗ್ಗೆ ಯಾವುದೇ ದಾಖಲೆ ನೀಡಿರುವುದಿಲ್ಲ. ಮು.ಮಾಲು.1 ರೆಡಿಮೇಡ ಶರ್ಟ ಅಥವಾ ಹೊಲಿಸಿದ ಅಂಗಿಯಾಗಿತ್ತೊ ಎಂಬ ಬಗ್ಗೆ ನಾನು ನಿಪಿ.1ರಲ್ಲಿ ನಮೂದು ಮಾಡಿರುವುದಿಲ್ಲ. ಮು. ಮಾಲು.1 ರೆಡಿಮೇಡ ಶರ್ಟ ಅಥ್ವಾ ಹೊಲಿಸಿದ ಶರ್ಟ ಆಗಿತ್ತೋ ಎಂಬ ಬಗ್ಗೆ ನನಗೆ ಈಗ ನೆನಪಿಲ್ಲ.

**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: 1

ಪಿ.ಡಬ್ಲ್ಯೂ: 2

ಅಂಗಡಿಯಿಂದ ಪೊಲೀಸ ಠಾಣೆ 150 ಮೀ. ದೂರದಲ್ಲಿದೆ. ನಾನು ಸಾಲವನ್ನು ಮಾಡಿದ ಸಾಮಾನುಗಳನ್ನು ಪಡೆದುಕೊಂಡಿದ್ದು ಅದರಲ್ಲಿ 8,000/-ರೂ.ಗಳನ್ನು ಮರು ಪಾವತಿ ಮಾಡಿದ ಬಗ್ಗೆ ಯಾವುದೇ ರಶೀದಿಯನ್ನು ಪಡೆದುಕೊಂಡಿರುವುದಿಲ್ಲ. ನಾನು ಯಾವ ಯಾವ ದಿನಾಂಕದಂದು ಹಣವನುನ ಮರು ಪಾವತಿ ಮಾಡಿರುತ್ತೇನೆ ಎಂಬ ಬಗ್ಗೆ ಬರೆದುಕೊಂಡಿರುವುದಿಲ್ಲ. ನಾನು ಮೊದಲ ಬಾರಿಗೆ ಹಾಗೂ ಕೊನೆಯ ಬಾರಿಗೆ ಯಾವ ಯಾವ ದಿನಾಂಕದಂದು ಹಣವನ್ನು ನೀಡಿದ್ದೇನೆ ಎಂಬ ಬಗ್ಗೆ ಬರೆಸಿರುವುದಿಲ್ಲ.

ನಿಪಿ.4ರಲ್ಲಿ ನನ್ನ ಮಾವ ಹಾಗೂ ಚಾಸಾ.5ರವರು ಎಲ್ಲಿಂದ ಬಂದಿದ್ದಾರೆ ಎಂಬ ಬಗ್ಗೆ ನಮೂದಿಸಿರುವುದಿಲ್ಲ. ಈ ಘಟನೆಯ ಪೂರ್ವದಲ್ಲಿ ಆರೋಪಿತರು ನನಗೆ ಬೈಯುತ್ತಿದ್ದಂತಹ ಸಂದರ್ಭದಲ್ಲಿ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಈ ಘಟನೆ ನಡೆದಿದೆ ಎನ್ನಲಾದ ಸಮಯದಿಂದ 08.30 ಗಂಟೆಗಳ ನಂತರದಲ್ಲಿ ದೂರನ್ನು ನೀಡಿರುತ್ತೇನೆ.

ನಾನು ಬೈಕನಲ್ಲಿ ಬಿದ್ದು ಪೆಟ್ಟು ಮಾಡಿಕುಂಡು ನಂತರ ನನ್ನ ಬೈಕಂನ್ನು ರಿಪೇರಿಗಾಗಿ ಗಾದ್ರಿರೆಜಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೈಕಿನಲ್ಲಿ ಬಿದ್ದು ಮಾಡಿಕುಂಡ ಪೆಟ್ಟನ್ನು ಉಪಯೋಗಿಸಿಕೊಂಡು ಆರೋಪಿತದಿನಿಗೆ ಹಣವನುನನೀಡುವುದನ್ನು ತಪ್ಪಿಸಿಕೊಳ್ಳಲು ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮಾವನವರು ಹೇಗೆ ದೂರನ್ನು ದಾಖಲಿಸಬೇಕು ಎಂದು ಚರ್ಚಿಸಿ 08.30 ಗಳ ವಿಳಂಬವಾಗಿ ದೂರನ್ನು ನೀಡಿರುತ್ತೇವೆ ಅಎಂದರೆ ಸರಿಯಲ್ಲ. ಚಾಸಾ.5 ಹಾಗೂ ನನ್ನ ಮಾವನವರು ಘಟನಾ ಸ್ಥಳಕ್ಕೆ ಬರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳವು ಜನನೀಬಿಡ ಪ್ರದೇಶವಾಗಿದ್ದು ಘಟನೆ ನಡೆದಿದ್ದೆ ಆದರೆ ಅಲ್ಲಿ ಸುಮಾರು ಜನರು ಸ್ವತಂತ್ರ ಸಾಕ್ಷಿದಾರರು ಇರುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಪ್ರದೇಶದಲ್ಲಿ ಅರೋಪಿತರಿಗೆ

**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: 1

ಪಿ.ಡಬ್ಲ್ಯೂ: 2

ಸೇರಿದ ಒಂದೇ ಅಂಗಡಿಯು ದೊಡ್ಡ ಅಂಗಡಿಯಾಗಿರುತ್ತದೆ ಎಂದರೆ ಸರಿ. ಆದ್ದರಿಂದ ಬೆಳಿಗ್ಗೆಯಿಂದ ಸಂಜೆಯವರೆಗೆ ಸದರಿ ಅಂಗಡಿಯು ಗ್ರಾಹಕರಿಂದ ತುಂಬಿಕೊಂಡಿರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ಸಾಮಗ್ರಿಗಳನ್ನು ಕಳುಹಿಸಲು ಆಟೋ ರೀಕ್ಷಾ ಹಾಗೂ 407 ವಾಹನಗಳು ಇರುತ್ತವೆ ಎಂದರೆ ಸರಿ. ಆರೋಪಿತರ ಅಂಗಡಿಯ ಕೆಲಸಗಾರರ ಪರಿಚಯ ನನಗೆ ಇದೆ ಎಂದರೆ ಸಾಕ್ಷಿ ನನಗೆ ನೋಡಿ ಪರಿಚಯ ಇದೆ ಎಂದು ನುಡಿಯುತ್ತಾರೆ. ನಿಪಿ.4ರಲ್ಲಿ ನಾನು ಆರೋಪಿಯ ಅಂಗಡಿಯಲ್ಲಿ ಕೆಲಸಗಾರರು ಇದ್ದರು ಎಂಬ ಬಗ್ಗೆನಮೂದಿಸಿರುತ್ತೇನೆ ಈ ವಿಷಯವನ್ನು ನಾನು ಸುಳ್ಳಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದಾನು ವೇಳ ಈ ಘಟನೆ ನಡೆದಿದ್ದೆ ಆದರೆ ಅವರನ್ನು ಸಾಕ್ಷಿದಾರರನ್ನಾಗಿ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಹಳಗೇರಿಯು 100 ಮೀ. ದೂರದಲ್ಲಿದೆ. ಘಟನಾ ಸ್ಥಳದಿಂದ ಜನ್ನಕ್ಕಿಯು 500 ಳಮೀ. ದೂರದಲ್ಲಿದೆ. ಘಟನಾ ಸ್ಥಳದ ಸುತ್ತಮುತ್ತ ಅಂಗಡಿಗಳು ಹಾಗೂ ಮನೆಗಳು ಇವೆ ಎಂದರೆ ಸರಿ. ನಾನು ನಿಪಿ.1ರ ಸಂದರ್ಭದಲ್ಲ್ ಎಲ್ಲಿ ಘಟನೆ ನಡೆದಿದೆ ಎಂಬ ಬಗ್ಗೆ ತೋರಿಸಿರುತ್ತೇವೆ. ಆ ಸಂದರ್ಭದಲ್ಲಿ ಪೊಲೀಸರು ಛಾಯಾಚಿತ್ರಗಳನುನ ತೆಗೆದಿರುತ್ತಾರೆ. ಎಷ್ಟು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1ರಲ್ಲಿ ನಮೂದು ಇರುವ ಚರ್ತುಗಡಿಗಳ ಕುರಿತು ನನಗೆ ಮಾಹಿತಿ ಇಲ್ಲ. ನಿಪಿ.41ನ್ನು ಎಷ್ಟು ಪುಟ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.1ನ್ನು 11.00 ರಿಂದ 11.30ವರೆಗೆ ತಯಾರಿಸಿರಬಹುದು. ಈ ಘಟನೆ ನಡೆದಿದ್ದೆ ಹೌದಾದರೆ ನನಗೆ ಸ್ವತಂತ್ರ ಸಾಕ್ಷಿದಾರರನಉನ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅವರು ಯಾರು ಒಪ್ಪಲಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಯಾವುದೇ ಘಟನೆ ನಡೆಯದೇ ಇದ್ದುರಿಂದ ಅವರು ಯಾರೂ ಒಪ್ಪಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮಾವನ ಮನೆ ಘಟ ಸಿನಾ ಸ್ಥಳದಿಂದ 500 ಮೀ.

**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: 1

ಪಿ.ಡಬ್ಲ್ಯೂ: 2

ದೂರದಲ್ಲಿದೆ. ಚಾಸಾ.5ರವರ ಮನೆಯು ಮಾರೂರು ಗ್ರಾಮದಲ್ಲಿದೆ. ನಾನು ಈಪ್ರಕರಣವನ್ನು ಸೃಷಿಟಸಿಕೊಂಡಿರುವುದರಿಂದ ದೂರದ ವ್ಯಕ್ತಿಗಳನ್ನು ಸಾಕ್ಷಿದಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ.ನ ಾನು ಹೇಳಿದ ಯಾವುಂದೇಆ ರೋಪವನುನ 1 ಹಾಗೂ 2ನೇ ಆರೋಪಿತರು ಮಾಡಲಿಲ್ಲ ಎಂದರೆಸ ರಿಯಲ್ಲ. ನಿಪಿ.1ನ್ನು ಘಟನಾ ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ದುಡ್ಡನ್ನು ನೀಡಲು ತಪ್ಪಿಸಿಕೊಳ್ಳಲು ಉದ್ದೇಶದಿಂದ ಈ ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಕುಮಟಾದಲ್ಲಿ ಚಿಕಿತ್ಸೆನೀಡಿದ ವೈದ್ಯಾಧಿಕಾರಿಗಳು ಹೆಚ್ಚಿನ ಚಿಕಿತ್ಸೆಗಾಗಿ ಹೋಗಲು ತಿಳಿಸಿರುತ್ತಾರೆ. ನನ್ನ ಕಿವಿಯಲ್ಲಿ ಬಂದ ರಕ್ತವು ಬಟ್ಟೆಯ ಮೇಲೆ ಬಿದ್ದಿರುವುದಿಲ್ಲ.

(ಈ ಹಂತದಲ್ಲಿ ಮಧ್ಯಾಹ್ನದ ಊಟದ ಸಮಯ ಆಗಿರುವುದರಿಂದ ಮುಂದುವರಿದ ಪಾಟೀ ಸವಾಲನ್ನು ಮಧ್ಯಾಹ್ನ ಊಟದ ಸಮಯದ ನಂತರ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ

**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: 1

ಪಿ.ಡಬ್ಲ್ಯೂ: 2

( ಮಧ್ಯಾಹ್ನ ಊಟದ ವಿರಾಮದ ನಂತರ ಸಾಕ್ಷಿಯ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ ಆರ್.ಜಿ.ಎನ್. ವಕೀಲರಿಂದ**

ನಿಪಿ.4ರಲ್ಲಿ 2 ದಿನಗಳ ನಂತರ ಹಣವನ್ನು ನೀಡುತ್ತೇನೆ ಎಂದು ನಮೂದಿಸಿದ್ದು ನಂತರ ನಾನು ಯಾವುದೇ ಹಣವನ್ನು ನೀಡಿರುವುದಿಲ್ಲ. ಆರೋಪಿತರ ವಿರುದ್ಧ ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಪ್ರಕರಣ ದಾಖಲಾದ ಬಗ್ಗೆ ನನಗೆ ಮಾಹಿತಿ ಇಲ್ಲ. ಹಾಗೂ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಯಾವುದೇ ಪ್ರಕರಣದ ದಾಖಲಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮು.ಮಾಲು 1ರಂತಹ ಶರ್ಟ ಎಲ್ಲ ಕಡೆಗಳಲ್ಲಿ ಸಿಗುತ್ತದೆ ಎಂದರೆ ಸರಿ,ಮು.ಮಾಲು 1 ನನಗೆ ಸಂಬಂಧಿಸಿದ್ದಾದರೆ ಸದರಿ ವಸ್ತುಗಳ ಕುರಿತು ಸರಿಯಾಗಿ ಮವಾಹಿತಿಯನ್ನು ನೀಡುತ್ತಿದ್ದೇನು ಎಂದರೆ ಸಾಕ್ಷಿಯು ಸದರಿ ಮು.ಮಾಲು 1 ನನಗೆ ಸಡಬಂಧಿಸಿದೆ ಎಂದು ನುಡಿಯುತ್ತಾರೆ. ಮು.ಮಾಲು 1 ನನಗೆ ಸಂಬಂಧಿಸಿದ್ದು ಎಂಬ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರಿದು ಸದರಿ ಶರ್ಟ ನನ್ನದಾಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ನನ್ನ ಮುಖ್ಯ ವಿಚಾರಣೆಯ ಸಂದರ್ಭದಲ್ಲಿ ಮೊದಲ ಬಾರಿಗೆ ನ್ನ ಕಿವಿಯಿಂದ ರಕ್ತ ಬಂದಿದೆ ಹೇಳಿರುವುದನ್ನು ಹೊರತುಪಡಿಸಿ ನಿಪಿ.1ರಲ್ಲಾಗಲೀ ನಿಪಿ.4ರಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.4ನ್ನು ತೋರಿಸಲಾಗಿ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಹೆಂಡತಿಯು ಘಟನಾ ಸ್ಥಳಕ್ಕೆ ಈ ಘಟನೆ ಆದ ನಂತರ 15 ರಿಂದ 20 ನಿಮಿಷಗಳ ನಂತರ ಬಂದಿರುತ್ತಾರೆ. ಘಟನೆಯ ನಂತರ ನಮ್ಮ ಪಕ್ಕದ ಮನೆಯವರು ವಿನೋದ ಮುಕ್ರಿ ಹಾಗೂ ಗಣಪತಿ

ಮುಕ್ರಿಯವರು ನನ್ನ ಹೆಂಡತಿಗೆ ದೂರವಾಣಿ ಕರೆಯನ್ನು ಮಾಡಿ ಹೇಳಿರುತ್ತಾರೆ. ನಾನು ಕುಮಟಾ ಆಸಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ನಾನು ಕಾರವಾರದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ನಾನು ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡಂತಹ ಹೆಚ್ಚಿನ ಚಿಕಿತ್ಸೆಯನ್ನು ಹುಬ್ಬಳ್ಳಿಯಲ್ಲಿ ಪಡೆದುಕೊಂಡಿರುತ್ತೇನೆ. ನಂತರ ನಾನು ಹೆಚ್ಚಿನ ಚಿಕಿತ್ಸೆಗಾಗಿ ಆದರ್ಶಕ್ಕೆ ಹೋಗಿ ಅಲ್ಲಿಂದ ಮಗಳೂರಿಗೆ ಹೊಗಿರುತ್ತೇನೆ. ಈ ಎಲ್ಲ ದಾಖಲಾತಿಗಳನ್ನು ಪೊಲೀಸರಿಗೆ ನೀಡಿರುತ್ತೇಃನೆ. ನಾನು ಈ ಮೇಲೆ ಹೇಳಿದ ಯಾವ ಆಸ್ಪತ್ರೆಯಲ್ಲಿಯೂ ಒಳರೋಗಿಯಾಗಿ ದಾಖಲುಗೊಂಡಿರುವುದಿಲ್ಲ.

ನನ್ನ ಹಾಗೂ ಆರೋಪಿತರ ನಡುವೆ 10 ನಿಮಿಷಗಳ ಕಾಲ ಗಲಾಟೆ ನಡೆದಿರುತ್ತದೆ. ನಮ್ಮ ಗಲಾಟೆ ನಡೆದ ಸಂದರ್ಭದಲ್ಲಿ ಯಾವುದೇ ವ್ಯಕ್ತಿಗಳು ನಿಂತಿರುವುದಿಲ್ಲ. ಹೋಗಿ ಬರುತ್ತಿದತಂಹ ವ್ಯಕ್ತಿಗಳು ನಮ್ಮ ಗಲಾಟೆಯನ್ನು ಲಕ್ಷವಹಿಸಿರುವುದಿಲ್ಲ. ನಾನು ನನ್ನ ಸಂಬಂಧಿಕರನ್ನು ಇಟ್ಟುಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿರುವುದರಿಂದ ನನಗೆ ಯಾವುದೇ ಸ್ವತಂತ್ರ ಸಾಕ್ಷಿದಾರರು ಬೆಂಬಲ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 1 ಹಾಗೂ 2 ನೇ ಆರೋಪಿತರು ಅವಾಚ್ಯ ಶಬ್ದದಿಂದ ಬೈದಿರುವುದಿಲ್ಲ ಎಂದೆ ಸರಿಯಲ್ಲ. ನಾನು ಆರೋಪಿತರ ಅಂಗಡಿಯಲಿಲರುವ ಸಿಸಿ ಟಿವಿ ಫುಟೇಜ ನ್ನು ತೆಗೆಯದೇ ಇರುವುದರಿಂದ ನಾನು ಆರೋಪಿತನ ಅಂಗಡಿಗೆ ಹೋಗಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ದುಡ್ಡನ್ನು ನೀಡುವುದರಿಂದ ತಪ್ಪಿಸಿಕೊಳ್ಳು ಉದ್ದೇಶದಿಂದ ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ನನಗೆ ಕುಮಟಾದ ವೈದ್ಯಾಧಿಕಾರಿಗಳು ಹೆಚ್ಚಿನ ಚಿಕಿತ್ಸೆಗೆ ಹೋಗಲು ನೀಡಿದ ಚೀಟಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಸದರಿ ದಾಖಲಾತಿಯನ್ನು ಪೊಲೀಸರು ನ್ಯಾಯಾಲಯಕ್ಕೆ ನೀಡುವುದಾಗಿ ತಿಳಿಸಿರುತ್ತಾರೆ. ನಾನು ಕುಮಟಾ ವೈದ್ಯಾಧಿಕಾರಿಗಳು ನೀಡಿದ ದಾಖಲಾತಿಯನ್ನು ಕಾರವಾರದ

**ಸಿ.ಸಿ.ನಂ.: 564/2024**

ಸಿ.ಡಬ್ಲ್ಯೂ: 1

ಪಿ.ಡಬ್ಲ್ಯೂ: 2

ವೈದಾಧಿಕಾರಿಗಳಿಗೆ ನೀಡಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಆರೋಪವನ್ನು ಆರೋಪಿತರು ಮಾಡಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ. ಕುಮಟಾ